1. ಸಂತಾಪ ಸೂಚನೆ

ಅಧ್ಯಕ್ಷರು:– ಈಗ ಸಂತಾಪ ಸೂಚನೆ

(ಈ ಹಂತದಲ್ಲಿ ಪಕ್ಷೇತರ ಸದಸ್ಯರುಗಳಾದ ಶ್ರೀ ವೆಂಕಟರಮಣಪ್ಪ, ಶ್ರೀ ಗೂಳಿಹಟ್ಟಿ ಶೇಖರ್, ಶ್ರೀ ಶಿವರಾಜ್ ತಂಗಡಗಿ, ಶ್ರೀ ನರೇಂದ್ರಸ್ವಾಮಿಯವರು ಸದನದ ಬಾವಿಯೊಳಗೆ ಬಂದು ಪುನಃ ತಮ್ಮ ಸ್ಥಾನಗಳಿಗೆ ಹಿಂತಿರುಗಿದರು)

ಅಧ್ಯಕ್ಷರು:– ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರೂ ಆಗಿದ್ದ ಡಾ.ಆರ್.ಬಿ. ಚೌಧರಿ ಅವರು ನಿಧನ ಹೊಂದಿದ್ದಾರೆಂದು ಅತ್ಯಂತ ವಿಷಾದದಿಂದ ಈ ಸದನಕ್ಕೆ ತಿಳಿಯಬಯಸುತ್ತೇನೆ.

ಡಾ: ಚೌಧರಿಯವರು ದಿನಾಂಕ 17ನೇ ಜನವರಿ 1939 ರಂದು ವಿಜಾಪುರದಲ್ಲಿ ಜನಿಸಿರುತ್ತಾರೆ. ಎಂಬಿಬಿಎಸ್ ಪದವಿಯನ್ನು ಪಡೆದಿದ್ದ ಶ್ರೀಯುತರು ವೃತ್ತಿಯಲ್ಲಿ ವೈದ್ಯರು ಮತ್ತು ಪ್ರವೃತ್ತಿಯಲ್ಲಿ ಸಮಾಜ ಸೇವಕರಾಗಿದ್ದರು. ವಿಜಾಪುರ ಜಿಲ್ಲೆಯ ಹಿಂದುಳಿದ ವರ್ಗದ ಜನಾಂಗದ ಏಳಿಗೆಗಾಗಿ ದುಡಿದವರಾಗಿದ್ದ ದಿವಂಗತರು, ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್‌ನ ಸದಸ್ಯರಾಗಿ ಮತ್ತು 18 ವರ್ಷಗಳ ಕಾಲ ವೈದ್ಯಕೀಯ ಅಧಿಕಾರಿಯಾಗಿ ಸೇವೆ ಸಲ್ಲಿಸಿರುತ್ತಾರೆ.

1989ರಲ್ಲಿ ವಿಜಾಪುರ ಜಿಲ್ಲೆಯ ಸಿಂಧಗಿ ಕ್ಷೇತ್ರದಿಂದ 9ನೇ ವಿಧಾನಸಭೆಗೆ ಚುನಾಯಿತರಾಗಿದ್ದ ದಿವಂಗತರು 1992 ರಿಂದ 1994ರ ಅವಧಿಯಲ್ಲಿ ಸಣ್ಣ ನೀರಾವರಿ ಮತ್ತು ಕಾರಾಗೃಹ ಹಾಗೂ ಬಂದೀಖಾನೆ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಡಾ. ಆರ್.ಬಿ.ಚೌಧರಿಯವರು ದಿನಾಂಕ 01.02.2012 ರಂದು ನಿಧನ ಹೊಂದಿರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮತ್ತು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು):– ಸನ್ಮಾನ್ಯ ಸಭಾಧ್ಯಕ್ಷರೆ, ಮಾಜಿ ಸಚಿವರು ಮತ್ತು ಬಿಜಾಪುರ ಜಿಲ್ಲೆಯ ನಾಯಕರಾಗಿದ್ದಂಥ ಡಾ:ಆರ್.ಬಿ.ಚೌಧರಿಯವರು ನಿಧನ ಹೊಂದಿದ್ದು ನಮ್ಮೆಲ್ಲರಿಗೂ ಬಹಳಷ್ಟು ದುಃಖ ತಂದಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಹುಸುತ್ತೇನೆ. ಸಿಂಧಗಿ ಕ್ಷೇತ್ರದಿಂದ 9ನೇ ವಿಧಾನಸಭೆಗೆ ಚುನಾಯಿತರಾಗಿದ್ದರು. ಸಣ್ಣ ನೀರಾವರಿ, ಕಾರಾಗೃಹ ಮತ್ತು ಬಂದೀಖಾನೆ ಖಾತೆ ಸಚಿವರಾಗಿಯೂ ಕೂಡ ಕೆಲಸ ಮಾಡಿದ್ದರು. ಅದರಲ್ಲಿ ಹಿಂದುಳೀದ ವರ್ಗದ ಬಗ್ಗೆ ಹೆಚ್ಚು ಕಳಕಳಿಯನ್ನು ಡಾ: ಚೌಧರಿಯವರು ಹೊಂದಿದ್ದರು ಎಂಬ ಮಾತನ್ನು ಹೇಳಬಯಸುತ್ತೇನೆ. ಅವರು ರಾಜಕೀಯ ಕ್ಷೇತ್ರದಲ್ಲಿ ಸಾಕಷ್ಟು ಕೆಲಸವನ್ನು ಮಾಡಿದ್ದರು. ಸಾಮಾಜಿಕವಾಗಿ ಸಹಿತ ಅವರು ಸಾಕಷ್ಟು ಜಾಗೃತಿ ಮೂಡಿಸುವಂಥ ಕೆಲಸವನ್ನು ಮಾಡಿದರು. ಅದರಲ್ಲಿಯೂ ಹಿಂದುಳಿದ ವರ್ಗದವರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ, ಅವರ ಉನ್ನತಿಯ ಸಲುವಾಗಿ ಸಾಕಷ್ಟು ಕಾರ್ಯಗಳನ್ನು ಮಾನ್ಯ ಚೌಧರಿಯವರು ಮಾಡಿದರು. ರಾಜಕೀಯವಾಗಿ ಒಂದು ಬಾರಿ ಅವರು ಶಾಸಕರಾಗಿ, ಸಚಿವರಾಗಿದ್ದರು ನಂತರ ಅವರಿಗೆ ಅವಕಾಶ ಸಿಗದಿದ್ದರೂ ರಾಜಕೀಯವಾಗಿ ಅವರು ತಮ್ಮ ದಿನನಿತ್ಯ ಸಾಮಾಜಿಕ ಚಟುವಟಿಕೆ ಮತ್ತು ರಾಜಕೀಯ ಚಟುವಟಿಕೆ ಬಗ್ಗೆ ಹೆಚ್ಚು ಕೇಂದ್ರೀಕರಿಸಿಕೊಂಡಿದ್ದರು. ಅಧಿಕಾರ ಇಲ್ಲದಾಗ್ಯೂ ಸಹಿತ ಸಮಾಜದ ಬಗ್ಗೆ ಹೆಚ್ಚಿನ ಕಾಳಜಿ ಹೊಂದಿದ್ದರು. ಹಿಂದುಳಿದ ವರ್ಗದವರ ಬಗ್ಗೆ ಹೆಚ್ಚಿನ ಕಾಳಜಿಯನ್ನು ತೋರಿಸುತ್ತಿದ್ದರು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬಿಜಾಪುರ ಮತ್ತು ಬಾಗಲಕೋಟೆ, ಉತ್ತರ ಕರ್ನಾಟಕದ ಭಾಗಗಳಲ್ಲಿ ಹೆಚ್ಚು ಕೆಲಸಗಳನ್ನು ಮಾಡಿ ಜನಪ್ರಿಯರಾಗಿದ್ದರು. ಹೀಗಾಗಿ ಅವರ ಅಗಲಿಕೆ ನಮ್ಮೆಲ್ಲರಿಗೆ ಹಾಗೂ ಅವರ ಕುಟುಂಬ ವರ್ಗಕ್ಕೆ ದುಃಖ ತಂದಿದೆ. ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯಿಂದಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು, ಅವರ ಆತ್ಮಕ್ಕೆ

ಶಾಂತಿಯನ್ನು ಭಗವಂತ ಕೊಡಲಿ ಎಂದು ಪ್ರಾರ್ಥಿಸಿ ನಾನು ಸರ್ಕಾರದ ಪರವಾಗಿ ತಮ್ಮ ಈ ಸಂತಾಪ ಸೂಚನೆಗೆ ಬೆಂಬಲವನ್ನು ಕೋರುತ್ತಿದ್ದೇನೆ.

ಅಧ್ಯಕ್ಷರು:– ವಿರೋಧ ಪಕ್ಷದ ನಾಯಕರು ಮಾತನಾಡಿ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಧ್ಯಕ್ಷರೆ, ತಾವು ತಂದಿರತಕ್ಕಂಥ ಈ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತೇನೆ. ನಿನ್ನೆ ಡಾ: ಆರ್.ಬಿ.ಚೌಧರಿಯವರು ನಿಧನರಾಗಿದ್ದಾರೆ. ಅವರು ಈ ಮನೆಯ ಸದಸ್ಯರಾಗಿದ್ದರು. 9ನೇ ವಿಧಾನಸಭೆಗೆ ಆಯ್ಕೆಯಾಗಿ ಬಂದಿದ್ದರು. ಶ್ರೀ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯವರಾಗಿದ್ದ ಸಂದರ್ಭದಲ್ಲಿ ಮಂತ್ರಿಯಾಗಿಯೂ ಕೂಡ ಅವರು ಕರ್ನಾಟಕ ಸರ್ಕಾರದಲ್ಲಿ ಕೆಲಸ ಮಾಡಿದ್ದರು. ಸಣ್ಣ ನೀರಾವರಿ ಮಂತ್ರಿಯಾಗಿ ಅನೇಕ ಜನಪರವಾದ ಕಾರ್ಯಗಳನ್ನು ಚೌಧರಿಯವರು ಮಾಡಿದ್ದರು. ಅವರು ಬಿಜಾಪುರ ಜಿಲ್ಲೆಯವರಾಗಿದ್ದು, ಹಿಂದುಳಿದ ಜಾತಿಯಿಂದ ಬಂದಂಥವರು. ಅವರು ವೃತ್ತಿಯಲ್ಲಿ ವೈದ್ಯರಾಗಿದ್ದು, ಬಹಳ ವರ್ಷ ಸರ್ಕಾರಿ ಸೇವೆಯಲ್ಲಿ ವೈದ್ಯರಾಗಿ ಕೆಲಸವನ್ನೂ ಸಹ ಮಾಡಿದ್ದರು. ನಂತರ ಸಾರ್ವಜನಿಕ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ರಾಜಕೀಯ ಕ್ಷೇತ್ರಕ್ಕೆ ಬಂದು ಒಂದು ಅವಧಿಯಲ್ಲಿ ಶಾಸಕರಾಗಿ, ಮಂತ್ರಿಯಾಗಿ ಅಪಾರವಾದ ಜನಪರವಾದ ಕಾಳಜಿಯನ್ನು ಇಟ್ಟುಕೊಂಡು, ವಿಶೇಷವಾಗಿ ಶೋಷಿತ ವರ್ಗದ ಜನರ ಪರವಾಗಿ ಕಾಳಜಿಯನ್ನು ಇಟ್ಟುಕೊಂಡಿದ್ದಂಥವರು. ಹಿಂದುಳಿದ ವರ್ಗದವರ, ಶೋಷಿತರ, ದಲಿತರ ಬಗ್ಗೇ ನಾವು ಸಾಮಾಜಿಕ ನ್ಯಾಯ ಕೊಡಿಸಲಿಕ್ಕೆ ಹೋರಾಟ ಮಾಡಬೇಕೆಂದು ಬಯಸಿ ಅವರು ಅನೇಕ ಸಾರಿ ನನ್ನನ್ನು ಭೇಟಿ ಆಗಿದ್ದರು. ಅವರು ಬಹಳ ಸಜ್ಜನ ವ್ಯಕ್ತಿ. ಬಿಜಾಪುರದಂಥ ಜಿಲ್ಲೆಯಲ್ಲಿ ರಾಜಕೀಯವಾಗಿ ಇಂಥವರು ಬರುವುದೇ ಬಹಳ ಕಷ್ಟ. ಆದರೂ ಕೂಡ ಒಮ್ಮೆ ಅವರು ರಾಜಕೀಯವಾಗಿ ಬಂದು ಎಂ.ಎಲ್.ಎ., ಆಗಿ ಅವರು ಕೆಲಸ ಮಾಡಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿಯೂ ಅವರು ಕೆಲಸ ಮಾಡಿದ್ದಾರೆ. ಹೀಗೆ ತಮ್ಮನ್ನು

ಬಹುಮುಖ ಸೇವೆಯಲ್ಲಿ ತೊಡಗಿಸಿಕೊಂಡಿ ಜನಪರವಾದ ಕಾಳಜಿಯನ್ನು ಇಟ್ಟುಕೊಂಡು ಸಮಾಜಮುಖಿಯಾಗಿ ಕೆಲಸ ಮಾಡಿದಂಥ ಒಬ್ಬ ಸಾಮಾಜಿಕ ನ್ಯಾಯದ ಪರವಾಗಿದ್ದಂಥ ವ್ಯಕ್ತಿಯಾಗಿದ್ದು, ಅತ್ಯಂತ ಹಿಂದುಳಿದ ಜಾತಿಯಾದ ಮೀನುಗಾರರ ಜಾತಿಯಿಂದ ಬಂದಂಥವರು. ಮೀನುಗಾರರು ಅಂದರೂ ಒಂದೇ, ಅಂಬಿಗರು ಎಂದರೂ ಒಂದೇ, ಎರಡೂ ಒಂದೇ ಅಲ್ಲವೇ? ಬೆಸ್ತರು, ಮೀನುಗಾರರು ಎಂದರೂ ಒಂದೇ. ಗುಲಬರ್ಗಾ ಜಿಲ್ಲೆಯ ಕಡೆ ಅವರಿಗೆ ಬೇರೆ ಹೆಸರನ್ನು ಕರೆಯುತ್ತಾರೆ. ಗಂಗಮತಸ್ಥರು ಎಂದರೂ ಒಂದೇ.

ಶ್ರೀ ಗೋವಿಂದ ಕಾರಜೋಳ:– ತಳವಾರರು, ಅಂಬಿಗರು, ಆಮೇಲೆ ಟೋಕರಿಕೋಳಿ ಎಂದರು ಕರೆಯುತ್ತಾರೆ.

ಶ್ರೀ ಸಿದ್ದರಾಮಯ್ಯ:– ತಳವಾರರು ಅವರಲ್ಲ. ತಳವಾರರು ಎಂದರೆ ಖಡ್ಗ ಹಿಡಿಯುವವರು.

ಶ್ರೀ ಗೋವಿಂದ ಕಾರಜೋಳ:– ನಮ್ಮ ಜಿಲ್ಲೆಯಲ್ಲಿ ಆ ರೀತಿ ಕರೆಯುತ್ತಾರೆ. ನಾನು ಅದೇ ಜಿಲ್ಲೆಯವನು. ನಾವಿಬ್ಬರೂ ಒಂದೇ ಊರಿನವರು.

ಶ್ರೀ ಸಿದ್ದರಾಮಯ್ಯ:– ಆಯಿತು ಇರಲಿ. ತಳವಾರರು ಅವರಲ್ಲ. ತಳವಾರರು ಎಂದರೆ ಖಡ್ಗ ಹಿಡಿಯುವ ಸೈನಿಕರು.

ಶ್ರೀ ಗೋವಿಂದ ಕಾರಜೋಳ:– ಬಿಜಾಪುರ ಜಿಲ್ಲೆಯಲ್ಲಿ ಆ ರೀತಿ ಕರೆಯುತ್ತಾರೆ.

ಶ್ರೀ ಸಿದ್ದರಾಮಯ್ಯ:– ಆಯಿತು ಬಿಡಿ. ಈಗ ಅದರ ಬಗ್ಗೆ ತಕರಾರು ಏಕೆ? ಇನ್ನು ಒಂದು ದಿನ ನಾವು ನೀವು ಚರ್ಚೆ ಮಾಡೋಣ. ಇಲ್ಲಿ ತಕರಾರು ಮಾಡುವುದು ಬೇಡ. ಮಾನ್ಯ ಅಧ್ಯಕ್ಷರೆ, ಅದರಿಂದ ಒಬ್ಬ ಅತ್ಯಂತ ಹಿಂದುಳಿದ ಜಾತಿಯಿಂದ ಬಂದು ಸಾರ್ವಜನಿಕ ಜೀವನದಲ್ಲಿ ಎಂ.ಬಿ.ಬಿ.ಎಸ್. ಪಾಸ್ ಮಾಡಿ, ಒಬ್ಬ ವೈದ್ಯನಾಗಿ ಅಂತಹ ಜಾತಿಯಿಂದ ಬಂದಂತಹವರು ಶಿಕ್ಷಣ ಪಡೆದುಕೊಳ್ಳುವುದು ಸಹ ಬಹಳ ಕಷ್ಟದ ಕೆಲಸ. ಅವರು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ನಾನು

ಚಿರಶಾಂತಿಯನ್ನು ಕೋರುತ್ತಾ, ಅವರ ಕುಟುಂಬ ವರ್ಗದವರಿಗೆ ಅವರ ಸಾವಿನಿಂದ ಒದಗಿರುವ ದುಃಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಹೇಳಿ, ಸಮಾಜಕ್ಕೆ ಅವರ ಸಾವಿನಿಂದ ಅಪಾರವಾದ ನಷ್ಟವಾಗಿದೆ ಎನ್ನುವ ಮಾತುಗಳನ್ನು ಹೇಳಿ, ಅವರನ್ನು ಸ್ಮರಣೆ ಮಾಡಿಕೊಳ್ಳುತ್ತಾ ಈ ಸಂತಾಪ ಸೂಚನೆ ನಿರ್ಣಯವನ್ನು ನಾನು ಬೆಂಬಲಿಸುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ):– ಮಾನ್ಯ ಅಧ್ಯಕ್ಷರೆ, ತಾವು ತಂದಿರುವಂತಹ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ, ಈ ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಡಾ: ಆರ್.ಬಿ.ಚೌಧರಿಯವರು ನಿನ್ನೆ ನಿಧನ ಹೊಂದಿದ್ದಾರೆ. ಅವರು 17ನೇ ಜನವರಿ 1939 ರಂದು ಬಿಜಾಪುರದಲ್ಲಿ ಜನಿಸಿದ್ದು, ಹಲವಾರು ಕ್ಷೇತ್ರಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಹಾಗೂ 18 ವರ್ಷಗಳ ಕಾಲ ವೈದ್ಯಕೀಯ ಅಧಿಕಾರಿಯಾಗಿ ಸೇವಾ ಸಲ್ಲಿಸಿರುತ್ತಾರೆ. ಅದೇ ರೀತಿ 9ನೇ ವಿಧಾನ ಸಭೆಗೆ ಚುನಾಯಿತರಾಗಿ ಹಾಗೂ 1992 ರಿಂದ 1994ರ ಅವಧಿಯಲ್ಲಿ ಸಣ್ಣ ನೀರಾವರಿ ಮತ್ತು ಕಾರಾಗೃಹ ಹಾಗೂ ಬಂದೀಖಾನೆ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ. ಅವರು ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದು, ಆ ಭಾಗದಲ್ಲಿ ಅಪಾರವಾದ ಜನಪ್ರಿಯತೆ ಪಡೆದಿದ್ದಾರೆ. ನಿನ್ನೆ ನಿಧನ ಹೊಂದಿದ್ದಾರೆ. ದೇವರು ಅವರ ಆತ್ಮಕ್ಕೆ ಶಾಂತಿ ಕೊಟ್ಟು, ಮತ್ತೆ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಆ ಭಗವಂತನು ಕೊಡಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ ಮತ್ತು ತಾವು ತಂದಂತಹ ಸಂತಾಪ ಸೂಚನೆಗೆ ಬೆಂಬಲವನ್ನು ಸೂಚಿಸುತ್ತೇನೆ.

ಶ್ರೀ ಗೋವಿಂದ ಕಾರಜೋಳ (ಸಣ್ಣ ನೀರಾವರಿ, ಕನ್ನಡ ಹಾಗೂ ಸಂಸ್ಕೃತಿ ಇಲಾಖೆ ಸಚಿವರು):– ಮಾನ್ಯ ಅಧ್ಯಕ್ಷರೆ, ಡಾ: ಆರ್.ಬಿ. ಚೌಧರಿಯವರು ನಿನ್ನೆ ದಿನ ನಿಧನರಾದ ಸುದ್ದಿ ಕೇಳಿ ನನ್ನ ಮನಸ್ಸಿಗೆ ಬಹಳ ನೋವಾಯಿತು ಮತ್ತು ದುಃಖವಾಯಿತು. ದಿವಂಗತ ಡಾ:ಆರ್.ಬಿ.

ಚೌಧರಿಯವರು ಹಾಗೂ ನಾನು ಒಂದೇ ಊರಿನಲ್ಲಿ ಬೆಳೆದಂತಹವರು. ದಿವಂಗತ ಡಾ: ಆರ್.ಬಿ.ಚೌಧರಿಯವರು ಅತ್ಯಂತ ಹಿಂದುಳಿದ ಜನಾಂಗಕ್ಕೆ ಸೇರಿದಂತಹವರು. ಅವರ ಮನೆತನದ ಒಂದು ವೈಶಿಷ್ಟ್ಯತೆ ಎಂದರೆ ಬಿಜಾಪುರ ಲೋಕಸಭಾ ಕ್ಷೇತ್ರಕ್ಕೆ ಅವರ ಮನೆತನದಿಂದ ಮೂರು ಬಾರಿ ಆಯ್ಕೆಯಾಗಿ ಬಂದಿದ್ದಾರೆ. ಅವರ ಅಣ್ಣನವರು ಎರಡು ಬಾರಿ ಹಾಗೂ ಅವರ ಕಾಕಾರವರು ಒಂದು ಬಾರಿ ಆಯ್ಕೆಯಾಗಿದ್ದರು. ಮೂರು ಸಾರಿ ಆಯ್ಕೆಯಾಗಿದ್ದರು. ಏಕೆಂದರೆ, ಹಿಂದುಳಿದ ವರ್ಗದವರಾದಂತಹ ಅತೀ ಸಣ್ಣ ಸಮಾಜದ ಜನಸಂಖ್ಯೆಯಿಂದ ಬಂದವರು ಸಾಮಾನ್ಯ ಕ್ಷೇತ್ರದಲ್ಲಿ ಗೆದ್ದು ಬರುವುದು ಸರ್ವೇಸಾಮಾನ್ಯವಾಗಿ ಸಾಧ್ಯವಿಲ್ಲ. ಆದರೆ, ಬಿಜಾಪುರದಲ್ಲಿ ಅವರ ಮನೆತನದಿಂದ ಈ ರೀತಿಯಾಗಿ ಗೆದ್ದು ಬಂದಿದ್ದಾರೆ. ದಿವಂಗತ ಡಾ.ಆರ್.ಬಿ. ಚೌಧರಿಯವರು ಸುಮಾರು 18 ವರ್ಷಗಳ ಕಾಲ ಸರ್ಕಾರದ ಸೇವೆಯಲ್ಲಿದ್ದಂತಹವರು, ವೈದ್ಯಾಧಿಕಾರಿಯಾಗಿ ಕೆಲಸ ಮಾಡಿದಂತಹವರು. ದಿವಂಗತ ಡಾ: ಆರ್.ಬಿ. ಚಾಧರಿಯವರು ಯಾವ ಮಟ್ಟಕ್ಕೆ ಇದ್ದರು ಎಂದರೆ, ಮುದ್ದೇಬಿಹಾಳದ ಮೆಡಿಕಲ್ ಅಫೀಸರ್ ಆಗಿದ್ದಂತಹ ಸಂದರ್ಭದಲ್ಲಿ ಕೆಲವು ರಾಜಕಾರಣಿಗಳು ಅವರ ಜನಪ್ರಿಯತೆಯನ್ನು ಕಂಡು ಹೊಟ್ಟೆಕಿಚ್ಚುಪಟ್ಟು ಅವರನ್ನು ಟ್ರಾನ್ಸ್‌ಫರ್ ಮಾಡಿಸಿದ್ದರು. ಆದರೆ, ಜನರು ಅವರನ್ನು ಸ್ಟ್ರೈಕ್ ಮಾಡಿ ಮತ್ತೆ ಅಲ್ಲಿಗೇ ಟ್ರಾನ್ಸ್‌ಫರ್ ಮಾಡಿಸುತ್ತಿದ್ದರು. ಅಂದರೆ, ಡಾ:ಆರ್.ಬಿ. ಚೌಧರಿಯವರು ಎಂದರೆ ಬಡವರ ಡಾಕ್ಟರ್ ಎಂದು ಹೇಳುತ್ತಿದ್ದರು. ಆ ರೀತಿಯ ಹೆಸರನ್ನು ಪಡೆದವರು ಅವರು. ಬಿಜಾಪುರ ಜಿಲ್ಲೆಯಲ್ಲಿ ಸುಮಾರು 18 ವರ್ಷಗಳ ಕಾಲ ಸೇವೆ ಮಾಡಿದ್ದಾರೆ. 24 ಗಂಟೆಗಳ ಕಾಲದಲ್ಲಿಯೂ ಕೆಲಸ ಮಾಡಿದಂತಹ ಒಬ್ಬ ವೈದ್ಯಾಧಿಕಾರಿ ಎಂದರೆ ಡಾ: ಆರ್.ಬಿ.ಚೌಧರಿಯವರು. ಆ ಕಾರಣದಿಂದಲೇ ಜನರು ಅವರನ್ನು ಬೆನ್ನತ್ತಿ, ಬೆಳೆಸಿ ಅವರನ್ನು ರಾಜಕೀಯಕ್ಕೆ ತಂದರು. ಒಂದು ಬಾರಿ ಸಿಂಧಗಿ ಕ್ಷೇತ್ರದಿಂದ ಆಯ್ಕೆಯಾಗಿ ಬಂದರು. ನಂತರ ಮಂತ್ರಿಯೂ ಕೂಡ ಆಗಿದ್ದರು. ಅವರು ಹಿಂದುಳಿದ ವರ್ಗಗಳ ಬಗ್ಗೆ, ಪರಿಶಿಷ್ಟ ಜಾತಿ ಜನಾಂಗದವರ ಬಗ್ಗೆ ಅತ್ಯಂತ ಕಳಕಳಿ ಕಾಳಜಿಯಿಂದ ಸೇವೆಯನ್ನು

ಮಾಡಿರುವಂತಹವರು. ಅವರ ಅಗಲಿಕೆಯಿಂದ ಹಿಂದುಳಿದ ವರ್ಗದವರಿಗೆ ಮತ್ತು ಪರಿಶಿಷ್ಟ ಜಾತಿ ಜನಾಂಗದವರಿಗೆ ತುಂಬಲಾರದಂತಹ ನಷ್ಟವಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ತಾವು ಏನು ಸಂತಾಪ ಸೂಚನೆಯನ್ನು ತಂದಿದ್ದೀರಿ, ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ನಾನು ಆ ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ ಮತ್ತು ಅವರ ಕುಟುಂಬ ವರ್ಗದವರ ದುಃಖ ಹಾಗೂ ನೋವಿನಲ್ಲಿ ನಾವೂ ಕೂಡ ಭಾಗಿಯಾಗಿದ್ದೇವೆ.

ಶ್ರೀ ಎಸ್.ಕೆ.ಬೆಳ್ಳುಬ್ಬಿ (ಬಸವನಬಾಗೇವಾಡಿ):– ಮಾನ್ಯ ಅಧ್ಯಕ್ಷರೆ, ನಿನ್ನ ನಮ್ಮನ್ನು ಅಗಲಿ ಹೋಗಿರುವಂತಹ ಹಿಂದಿನ ಸಚಿವರಾಗಿದ್ದಂತಹ ಡಾ: ಆರ್.ಬಿ.ಚೌಧರಿಯವರು ಅಪಾರ ಜನಪ್ರಿಯತೆಯನ್ನು ಗಳಿಸಿಕೊಂಡಿರುವಂತಹವರು. ವೈದ್ಯರಾಗಿ ದೀನದಲಿತರ, ಬಡವರ ಸೇವೆಯನ್ನು ನಿರಂತರವಾಗಿ ಮಾಡಿಕೊಂಡು ಬಂದಿರುವಂತಹವರು ಹಾಗೂ ಸಿಂಧಗಿ ಕ್ಷೇತ್ರದಿಂದ ಶಾಸಕರಾಗಿ, ಸಣ್ಣ ನೀರಾವರಿ ಇಲಾಖೆಯ ಸಚಿವರಾಗಿ ಕೂಡ ಯಶಸ್ವಿಯಾಗಿ, ಪಕ್ಷಾತೀತವಾಗಿ ಎಲ್ಲಾ ಜನರು ಮೆಚ್ಚುವ ರೀತಿಯಲ್ಲಿ ಕೆಲಸ ಮಾಡಿರುವಂತಹ ಒಬ್ಬ ಆದರ್ಶ ವ್ಯಕ್ತಿಯಾಗಿದ್ದರು. ಜೊತೆಗೆ ಇವತ್ತು ಈ ಸರ್ಕಾರ ಮಾಡಿರುವಂತಹ ನದಿಯಿಂದ ಕೆರೆ ತುಂಬಬೇಕು ಎನ್ನುವ ಯೋಜನೆಯನ್ನು ಜಾರಿಗೆ ತಂದಿದೆ. ದಿವಂಗತರು ಸಣ್ಣ ನೀರಾವರಿ ಸಚಿವರಾಗಿದ್ದಾಗ ಆ ಕನಸನ್ನೂ ಕೂಡ ಕಂಡಿರುವಂತಹ ನಾಯಕರು ಅವರು. ನದಿಯಿಂದ ಕೆರೆಗಳನ್ನು ತುಂಬಬೇಕು ಎಂದು ಪ್ರಯತ್ನ ಮಾಡಿದ್ದರು. ಆದರೆ, ಆಗ ಅದು ಸಹಕಾರವಾಗಲಿಲ್ಲ. ನನಗೆ ಮತ್ತು ಅವರಿಗೆ ಬಹಳ ನಿಕಟವಾದ ಆತ್ಮೀಯತೆ ಇತ್ತು. ಅವರ ಅಗಲಿಕೆಯಿಂದ ಇವತ್ತು ಕರ್ನಾಟಕ ರಾಜ್ಯ ಮತ್ತು ಬಿಜಾಪುರ ಜಿಲ್ಲೆ, ವಿಶೇಷವಾಗಿ ಹಿಂದುಳಿದ ವರ್ಗಗಳ ಜನತೆಗೆ ತುಂಬಲಾರದ ಹಾನಿಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ದೇವರು ಹುಟ್ಟು ಕೊಟ್ಟಮೇಲೆ ಸಾವು ನಿಶ್ಚಿತ. ಅದು ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಇದು ಒಂದು ಜೀವನ ನಾಟಕ. ಈ ನಾಟಕದಲ್ಲಿ ಆ ದೇವರು ಕೊಟ್ಟಿರುವಂತಹ

ಪಾತ್ರಗಳನ್ನು ಯಶಸ್ವಿಯಾಗಿ ಮಾಡಿದರೆ ಮಾತ್ರ ಜೀವನ ಸಾರ್ಥಕ ಎನ್ನುವ ಮಾತಿಗೆ ದಿವಂಗತ ಡಾ: ಆರ್.ಬಿ.ಚೌಧರಿಯವರು ಸಾಕ್ಷಿಯಾಗಿದ್ದರು ಎನ್ನುವ ಮಾತನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಹೀಗಾಗಿ ಇವತ್ತು ಅವರ ಅಗಲಿಕೆಯಿಂದ ಏನು ಆ ಭಾಗದ ಹಿಂದುಳಿದ ವರ್ಗದ ಜನತೆಗೆ ಮತ್ತು ಆ ಕುಟುಂಬ ವರ್ಗದವರಿಗೆ ತುಂಬಲಾರದ ಹಾನಿಯಾಗಿದೆ. ಆ ಹಾನಿಯನ್ನು ತುಂಬತಕ್ಕಂತಹ ಶಕ್ತಿಯನ್ನು ಆ ಭಗವಂತ ಅವರಿಗೆ ಕೊಡಲಿ ಮತ್ತು ಅವರ ಆತ್ಮಕ್ಕೆ ಆ ಭಗವಂತನು ಚಿರಶಾಂತಿಯನ್ನು ಕೊಡಲಿ ಎಂದು ಬೇಡಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು:– ದಿವಂಗತರಾದ ಡಾ:ಆರ್.ಬಿ.ಚೌಧರಿಯವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು:– ಈಗ ಪ್ರಶ್ನೋತ್ತರ.

(ಈ ಹಂತದಲ್ಲಿ ಪಕ್ಷೇತರ ಸದಸ್ಯರಾದ ಶ್ರೀ ಪಿ.ಎಂ.ನರೇಂದ್ರಸ್ವಾಮಿಯವರು ತಮ್ಮ ಸ್ಥಾನದಿಂದ ಸದನದ ಬಾವಿಯ ಕಡೆಗೆ ಬರುತ್ತಾ ಮಾತನಾಡುತ್ತಿದ್ದರು)

ಶ್ರೀ ಪಿ.ಎಂ.ನರೇಂದ್ರಸ್ವಾಮಿ:– ಅಧ್ಯಕ್ಷರೆ, ಕೂಡಲೆ ನೀವು ಆ ಸ್ಪೀಕರ್ ಸ್ಥಾನವನ್ನು ತೆರವುಗೊಳಿಸಬೇಕು.

(ಗೊಂದಲ)

ಅಧ್ಯಕ್ಷರು:– Question hour ಆದಮೇಲೆ ತೆಗೆದುಕೊಳ್ಳೋಣ.